# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿ.ಡಿ.-1633/2017/ಡಿ.ಆರ್.ಇ-2

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 06/09/2019

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಗುಬ್ಬಿ ತಾಲ್ಲೂಕು ಕಡಬಾ ಹೋಬಳಿ ದೊಣ್ಣೇರಿ ಗ್ರಾಮದ ಸರ್ವೆ ನಂ. 58, 59, 60, 61, 62, 63, 64 ಮತ್ತು 65 ಖರಾಬು ಜಮೀನಿನಲ್ಲಿರುವ ಒತ್ತುವರಿಯಾದ ಬಂಡಿ ದಾರಿಯನ್ನು ತೆರೆವುಗೊಳಿಸಲು ಸೂಕ್ತ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ ಮೋಹನ್ ಡಿ.ಜಿ. ಬಿನ್ ಗಂಗಣ್ಣ, ದೊಣ್ಣೇರಿ ಗ್ರಾಮ, ಎಂ.ಎಸ್.ಹಳ್ಳಿ ಅಂಚೆ, ಕಡಬಾ ಹೋಬಳಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, ತಹಶೀಲ್ದಾರ್, ತಾಲ್ಲೂಕು ಕಛೇರಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ತಮ್ಮ ಗ್ರಾಮದ ಸರ್ವೆ ನಂ. 7, 10, 58, 59, 60, 61, 62, 63, 64 ಮತು 65ರ ಖರಾಬು ಜಮೀನುಗಳಲ್ಲಿ ಬಂಡಿ ದಾರಿ ಅರ್ಧ ಸರಪಳಿ ಇದ್ದರೂ ಸಹಿತ ಸರ್ವೆ ನಂ. 64ರ ಜಮೀನಿನ ವಾರಸುದಾರರಾದ ಶ್ರೀಮತಿ ಚಿನ್ನಮ್ಮ ಹಾಗೂ ಆಕೆಯ ಮಗ ಹರೀಶ್ ಗೋಮಾಳಕ್ಕೆ ಸೇರಿದ ಸರ್ವೆ ನಂ. 7 ಮತ್ತು 10ರ ಜಮೀನುಗಳನ್ನು ಉಳುಮೆ ಮಾಡಿ ಯಾರು ಹೋಗದಂತೆ ಬೇಲೆ ಹಾಕಿದ್ದಾರೆ, ಇದನ್ನು ತೆರೆವುಗೊಳಿಸಬೇಕೆಂದು ಕೋರಿದ್ದರು.

3. ಎದುರುದಾರರು ತಮ್ಮ ವರದಿ ಸಲ್ಲಿಸಿ, ಗುಬ್ಬಿ ತಾಲ್ಲೂಕು ಕಡಬಾ ಹೋಬಳಿ ದೊಣ್ಣೀರೆ ಗ್ರಾಮದ ಸರ್ವೆ ನಂ. 58, 59, 60, 61, 62, 63, 64 ಮತು 65 ಖರಾಬು ಜಮೀನಿನಲ್ಲಿ ಒತ್ತುವರಿ ಬಿಡಿಸಲು ಹೋದಾಗ, ಒತ್ತುವರಿ ಜಾಗದಲ್ಲಿ ಒಂದು ಕೊಳವೆ ಬಾವಿ, ತೆಂಗಿನ ಮರಗಳು, ಅಡಿಕೆ ಮರಗಳು ಇರುತ್ತವೆ. ಅವುಗಳ ಪೈಕಿ ಕೆಲ ಮರಗಳನ್ನು ತೆರೆವುಗೊಳಿಸಿದ್ದು, ಉಳಿದುದ್ದನ್ನು ತೆರೆವುಗೊಳಿಸುವ ಸಂದರ್ಭದಲ್ಲಿ ಖಾತೆದಾರರು ಒತ್ತುವರಿ ಜಾಗವನ್ನು ತೆರೆವು ಮಾಡಲು ತಂಟೆ ತಕರಾರು ಮಾಡಿದ್ದರಿಂದ ಭಾಗಶ: ತೆರೆವುಗೊಳಿಸಲಾಯಿತು. ಸದರಿ ಖರಾಬು ದಾರಿಯನ್ನು ಜೆ.ಸಿ.ಬಿ.,ಯಿಂದ ಭಾಗಶ: ಖುಲ್ಲಾ ಪಡಿಸಿದ್ದು ಅದಕ್ಕೆ ಸಾರ್ವಜನಿಕರು ಓಡಾಡಲು ತೊಂದರೆ ಇರುವುದಿಲ್ಲವೆಂದು ವರದಿ ಮಾಡಿದ್ದಾರೆ ಮತ್ತು ತೆರೆವುಗಳಿಸಿರುವ ವಿಚಾರದಲ್ಲಿ ಯಾವುದೇ ತಂಟೆ ತಕರಾರು ಇರುವುದಿಲ್ಲವೆಂದು ಗ್ರಾಮಸ್ಥರು ಹೇಳಿಕೆ ಮಹಜರ್ ನೀಡಿದ್ದಾರೆ. ಆದ್ದರಿಂದ, ಪ್ರಕರಣನ್ನು ಮುಕ್ತಾಯ ಮಾಡಬೇಕೆಂದು ಕೋರಿದ್ದಾರೆ.

4. ಎದುರುದಾರರು ತಮ್ಮ ಪ್ರತ್ಯುತ್ತರ ಸಲ್ಲಿಸಿದ್ದು, ಅದರಲ್ಲಿ, ಗುಬ್ಬಿ ತಹಶೀಲ್ದಾರ್ ರವರ ಆದೇಶದಂತೆ ದಿನಾಂಕ: 23/08/2018 ರಂದು ಗುಬ್ಬಿ ತಾಲ್ಲೂಕು ಸರ್ವೆಯರ್ ಶ್ರೀ ನಿಜಗುಣಪ್ಪ, ಕಡಬಾ ಹೋಬಳಿಯ ತನಿಖಾಧಿಕಾರಿ ಶ್ರೀ ನಾಗಭೂಷಣ್ ಹಾಗೂ ಗ್ರಾಮ ಲೆಕ್ಕಿಗ ಶ್ರೀ ರಾಜೀವ್ ತಮ್ಮ ಗ್ರಾಮದ ಸರ್ವೆ ನಂ. 58, 59, 60, 61, 62, 63, 64 ಮತು 65 ಖರಾಬು ಒತ್ತುವರಿ ಬಿಡಿಸಲು ಸ್ಥಳಕ್ಕೆ ಬೇಟಿ ನೀಡಿದಾಗ ಖಾತೆದಾರರು ಒತ್ತುವರಿ ಜಾಗವನ್ನು ತೆರೆವು ಮಾಡಲು ತಂಟೆ ತಕರಾರು ಮಾಡಿರುತ್ತಾರೆ. ಒತ್ತುವರಿ ಜಾಗದಲ್ಲಿ ಒಂದು ಕೊಳವೆ ಬಾವಿ, ತೆಂಗಿನ ಮರಗಳು, ಅಡಿಕೆ ಮರಗಳು ಇರುತ್ತವೆ. ಅವು ಯಾವುದನ್ನು ತೆರೆವುಗೊಳಿಸದೇ ತಿರುಗಾಡಲು ಬರಿ 6 ಅಡಿ ಜಾಗವನ್ನು ತೆರೆವುಗೊಳಿಸಿದ್ದಾಗಿ ವರದಿ ಸಲ್ಲಿಸಿದ್ದಾರೆ. ಆದರೆ, ದಾರಿಗೆ ಹೊಂದಿಕೊಂಡಿರುವ ಸರ್ವೆ ನಂ. 7, 10 ಮತ್ತು 11 ಹಾಗೂ ಖಾತೆದಾರರ ಸರ್ವೆ ನಂ. 65 ರಲ್ಲಿ ಮಾತ್ರ ಪೂರ ಜಾಗವನ್ನು ತೆರೆವುಗೊಳಿಸಿರುತ್ತಾರೆ. ಉಳಿಕೆ ಖಾತೆದಾರರ ಸರ್ವೆ ನಂಬರ್‌ಗಳಲ್ಲಿ 6 ಅಡಿ ಜಾಗವನ್ನು ತಿರುಗಾಡಲು ತೆರೆವುಗೊಳಿಸಿದ ಜಾಗವನ್ನು ಉದಿಬದುವನ್ನು ನಿರ್ಮಿಸಿಕೊಂಡು ಅಕ್ರಮಿಸಿ ಓಡಾಡದಂತೆ ಮಾಡಿದ್ದಾರೆ. ಆದ್ದರಿಂದ, ಸರ್ಕಾರಿ ಖರಾಬು ಬಂದಿ ದಾರಿಯನ್ನು ಪೂರ ತೆರೆವುಗೊಳಿಸಬೇಕೆಂದು ಕೋರಿದ್ದಾರೆ.

5. ದಾಖಲೆಗಳನ್ನು ಪರಿಶೀಲಿಸಲಾಯಿತು. ಎದುರುದಾರರು ಸಲ್ಲಿಸಿರುವ ದಿನಾಂಕ: 21/02/2019ರ ವರದಿ ಹಾಗೂ ಗ್ರಾಮಸ್ಥರ ಮುಂದೆ ಜರುಗಿಸಿದ ಮಹಜರ್, ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿ ರವರ ವರದಿಯ ಪ್ರತಿಗಳನ್ನು ಪರಿಶೀಲಿಸಿದಾಗ, ಸರ್ಕಾರಿ ಖರಾಬನ್ನು ಸಂಪೂರ್ಣವಾಗಿ ತೆರೆವುಗೊಳಿಸಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ದೂರುದಾರರ ಪ್ರತ್ಯುತ್ತರದಿಂದ ಸರ್ವೆ ನಂ. 7, 10, 11 ಮತ್ತು 65ರ ಜಾಗ ತೆರೆವುಗೊಳಿಸಿದ್ದು, ಉಳಿಕೆ ಖಾತೆದಾರರ ಸರ್ವೆ ನಂಬರ್‌ಗಳಲ್ಲಿ 6 ಅಡಿ ಜಾಗವನ್ನು ತಿರುಗಾಡಲು ತೆರೆವುಗೊಳಿಸಿದ ಜಾಗವನ್ನು ಉದಿಬದುವನ್ನು ನಿರ್ಮಿಸಿಕೊಂಡು ಅಕ್ರಮಿಸಿ ಓಡಾಡದಂತೆ ಮಾಡಿದ್ದಾರೆಂದು ಉಲ್ಲೇಖಿಸಿರುವುದರಿಂದ ಬಂಡಿ ದಾರಿ ಸಹಿತ ಇಲ್ಲದಂತಾಗಿದೆ ಎಂದು ಕಂಡುಬರುತ್ತದೆ.

6. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಗುಬ್ಬಿ ತಾಲ್ಲೂಕು ಕಡಬಾ ಹೋಬಳಿ ದೊಣ್ಣೇರಿ ಗ್ರಾಮದ ಸರ್ವೆ ನಂ. 58, 59, 60, 61, 62, 63, 64 ಮತ್ತು 65 ಖರಾಬು ಜಮೀನಿನಲ್ಲಿರುವ ಒತ್ತುವರಿಯಾದ ಬಂಡಿ ದಾರಿಯನ್ನು ತೆರೆವುಗೊಳಿಸಲು ಸೂಕ್ತ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

**[ನ್ಯಾಯಮೂರ್ತಿ ಎನ್. ಆನಂದ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**